

ಹಲೋಂಗ್ ಬೇ ದ್ವೀಪ ಸಮೂಹ



‘ವಿಸ್ಮಯಕಾರಿ ಗುಹೆ’
ಸಂಗ್‌ಸಾಟ್ ಒಳಾವರಣ

ಆದರೆ ಹಲೋಂಗ್ ಬೇ ಭೌಗೋಳಿಕ ರಚನೆ ಪ್ರಕಾರ, ಇಲ್ಲಿ ಸುಣ್ಣದ ಕಲ್ಲುಗಳು ರೂಪುಗೊಳ್ಳಲು ಆರಂಭವಾಗಿ ಸುಮಾರು 340 ಮಿಲಿಯನ್ ವರ್ಷಗಳೇ ಆಗಿವೆ. ದಟ್ಟವಾದ ಸುಣ್ಣದ ಕಲ್ಲುಗಳನ್ನು ಹೊಂದಿದ್ದ ಈ ಪ್ರದೇಶಕ್ಕೆ ಕಾರ್ಬೋನೇಟ್ ಮಡ್ಡಿ–ನಿಕ್ಷೇಪಗಳು ಸೇರಿ ಕ್ರಮೇಣ ಆ ಕಲ್ಲುಗಳು ಇನ್ನಷ್ಟು ಗಟ್ಟಿಯಾದವಂತೆ. ಇವೇ, ಇಂದು ದ್ವೀಪಗಳಾಗಿ ನಿಂತಿರುವುದೆಂದು ಅಂದಾಜಿಸಲಾಗಿದೆ.

ಈ ದ್ವೀಪ ಸಮುದಾಯಗಳಲ್ಲಿ ಸುಣ್ಣದ ಕಲ್ಲಿನ ಬೆಟ್ಟಗಳು ಗೋಪುರಗಳಂತಿದ್ದು, ದೂರದಿಂದ ನೋಡಿದರೆ ನಮ್ಮ ದೇವಸ್ಥಾನಗಳ ರಥದ ಆಕಾರದಲ್ಲಿ ಕಾಣುತ್ತವೆ. ಕೆಲವು ಬೆಟ್ಟಗಳಲ್ಲಿ ಅತ್ಯಂತ ಸುಂದರ ಗುಹೆಗಳಿವೆ. ನೋಡುತ್ತಿದ್ದರೆ ಕುತೂಹಲ ಹೆಚ್ಚಿಸುವ, ಹಲವು ಕಲ್ಪನೆಗಳಿಗೆ ಎಡೆಮಾಡಿಕೊಡುವ, ಪ್ರಕೃತಿಯ ಅದ್ಭುತಕ್ಕೆ ತಲೆ ಬಾಗಲೇಬೇಕೆನಿಸುವ ಗುಹೆಗಳವು. ಈ ಬೆಟ್ಟಗಳಲ್ಲೇ ಸಿಹಿ ನೀರಿನ ಕೊಳಗಳೂ ಇವೆ.

ಈ ಪುಟ್ಟ ದ್ವೀಪಗಳಲ್ಲಿ ಕಾಡು ಪ್ರಾಣಿಗಳಿಲ್ಲ. ಗಿಡ್ಡ ಬಾಲದ, ಕೆಂಪು ಮೂತಿಯ ಕೋತಿ, ಹಲ್ಲಿ, ಅಳಿಲು ಮುಂತಾದ ಪ್ರಾಣಿಗಳು ಮಾತ್ರ ಅಲ್ಲಲ್ಲಿ ಕಾಣಸಿಗುತ್ತವಷ್ಟೆ.

‘ಹಲೋಂಗ್ ಬೇ’ ವಿಯೆಟ್ನಾಂ ಸರ್ಕಾರಕ್ಕೆ ಚಿನ್ನದ ಗಣಿ ಇದ್ದಂತೆ. ಪ್ರತಿ ವರ್ಷ ಲಕ್ಷಾಂತರ ಪ್ರವಾಸಿಗರು ಲಗ್ಗೆ ಇಡುತ್ತಾರೆ. ಪ್ರವಾಸಿಗರನ್ನು ಮನರಂಜಿಸಲು ಹಲವಾರು ಐಷಾರಾಮಿ ಕ್ರೂಸ್‌ಗಳು ಟೊಂಕ ಕಟ್ಟಿ ನಿಂತಿವೆ.


